


ಹಿಂದಿ ಮೂಲ: ಶರದ್ ಸಿಂಗ್
ಕನ್ನಡಕ್ಕೆ: ಡಿ.ಎನ್. ಶ್ರೀನಾಥ್
ಕಲೆ: ಎಚ್.ಎಸ್. ಮೋನಪ್ಪ

# ಬಾಳ ಹಾದಿಯಲ್ಲಿ ಕಷ್ಟಗಳ ಸರಮಾಲೆ

ಸುಗಂಧಾ ತನ್ನ ಹುಟ್ಟುಹಬ್ಬವನ್ನು ಅಮ್ಮನ ಮನೆಯಲ್ಲಿ ಆಚರಿಸುತ್ತಾ, 'ನನ್ನ ಹುಟ್ಟುಹಬ್ಬ ನಡೆದ ನಾಲ್ಕು ತಿಂಗಳ ನಂತರ ಅಪ್ಪಾ ಮತ್ತು ಅಮ್ಮನ ನಡುವೆ ಈ ಶೋಭೆ ತರದ ಮಾತುಕತೆಯ ಜಗಳ ಮೊದಲ ಬಾರಿಗೆ ನನ್ನೆದುರು ಘಟಿಸಿತು. ಇದಕ್ಕೆ ಮೊದಲು ಜಗಳ ಆರಂಭವಾಗುತ್ತಲೇ ಅಮ್ಮ ನನಗೆ, 'ಸುಗಂಧಾ, ನಿನ್ನ ಕೋಣೆಗೆ ಹೋಗು!' ಎನ್ನುತ್ತಿದ್ದರು. ನಾನು ಆಜ್ಞೆಯನ್ನು ಪಾಲಿಸುತ್ತಿದ್ದೆ, ಕೋಣೆಗೆ ಹೋಗುತ್ತಿದ್ದೆ. ಸ್ವಲ್ಪ ಹೊತ್ತಿನ ನಂತರ ಎದೆಯ ಬಡಿತದೊಂದಿಗೆ ಹೊರಗೆ ಬಂದು ಇಣುಕಿ ಅಪ್ಪಅಮ್ಮನ ಜಗಳವನ್ನು ನೋಡುತ್ತಿದ್ದೆ. ಅಮ್ಮ ಎರಡನೆಯ ಬಾರಿ ಮಗುವಿಗೆ ಜನ್ಮ ನೀಡಿದಾಗ, ಮಗ ಹುಟ್ಟಿದ್ದ, ಅಂದರೆ ನನ್ನ ತಮ್ಮ ಹುಟ್ಟಿದ್ದ. ಅವನಿಗೆ ನ್ಯುಮೋನಿಯಾ ಆಗಿ ಮೂರು ತಿಂಗಳ ಅಲ್ಪ ವಯಸ್ಸಿನಲ್ಲಿಯೇ ನಿಧನನಾದ. ಅಂದಿನಿಂದ ಅಮ್ಮ ಮತ್ತು ಅಪ್ಪನ ನಡುವೆ ದೂರ ಹೆಚ್ಚಿತು.

ಅನೇಕ ದಿನಗಳ ನಂತರ, ಅಪ್ಪಾ ಓರ್ವ ಸಂಶೋಧನಾ ವಿದ್ಯಾರ್ಥಿನಿಗೆ 'ಆಶ್ರಯ' ಕೊಟ್ಟಿರುವ ವಿಷಯ ತಿಳಿಯಿತು. ಆ ವಿದ್ಯಾರ್ಥಿನಿಯ ಸಂಶೋಧನೆ ಮುಗಿದ ನಂತರ ಅವಳಿಗೆ ತಮ್ಮ ವಿಶ್ವವಿದ್ಯಾಲಯದಲ್ಲಿ ಲೆಕ್ಚರರ್ ಕೆಲಸವನ್ನೂ ಕೊಡಿಸಿದರು. ಮೊದಲು ಟೆಂಪರರಿ, ನಂತರ ಪರ್ಮನೆಂಟ್. ಅಪ್ಪನ ಬಹುತೇಕ ಸಂಜೆಗಳು ಅವಳ ಬಳಿಯೇ ಕಳೆಯುತ್ತಿದ್ದವು. ಈ ವಿಷಯ ತಿಳಿಯುವುದಕ್ಕೂ ಮೊದಲೇ ಅಂದು ಅಮ್ಮ ಮತ್ತು ಅಪ್ಪನ ಜಗಳ ಮೊದಲ ಬಾರಿಗೆ ನನ್ನ ಪ್ರತ್ಯಕ್ಷ ಉಪಸ್ಥಿತಿಯಲ್ಲಿ ನಡೆದಾಗ, ಅಮ್ಮ ನನಗೆ ಅಲ್ಲಿಂದ ಹೋಗುವಂತೆ ಹೇಳುವುದನ್ನು ಮರೆತಿದ್ದಳು ಅಥವಾ ಅವರು ನನ್ನೆಡೆಗೆ ನೋಡಿಯೇ ಇರಲಿಲ್ಲ. ಅಪ್ಪಾ ಹೋದ ನಂತರ ಅಮ್ಮ ಹೀಗೆ ತಣ್ಣನೆಯ ನೆಲದ ಮೇಲೆ ತುಂಬಾ ಹೊತ್ತು ಕೂತಿರುವುದನ್ನು ನೋಡಿ ನನಗೆ ಗಾಬರಿಯಾಗಿತ್ತು. ಅಮ್ಮ ತಾವೇ ಎದ್ದು ನಿಲ್ಲುತ್ತಾರೆ ಎಂದು ನಾನು ನಿರೀಕ್ಷಿಸಿದ್ದೆ, ಆದರೆ ಅವರು ಅಲ್ಲಿಂದ ಏಳಲಿಲ್ಲ. ಅವರು ಯಾವ ಯೋಚನೆಯಲ್ಲಿ ಮುಳುಗಿದ್ದರೋ! ಅವರ ಮುಖ ಬಿಳುಪಾಗಿದ್ದು, ಭಾವಶೂನ್ಯವಾಗಿತ್ತು. ನಾನು ಅಮ್ಮನನ್ನು ಈ ಸ್ಥಿತಿಯಲ್ಲಿ ಈ ಮೊದಲು ನೋಡಿರಲಿಲ್ಲ. ನನ್ನಿಂದ ತಡೆದುಕೊಳ್ಳಲು ಸಾಧ್ಯವಾಗದಿದ್ದಾಗ, ನಾನು ಹೆದರುತ್ತಾ ಅಮ್ಮನ ಬಳಿಗೆ ಹೋದೆ.

'ಅಮ್ಮಾ! ಏಳು, ನೆಲ ತಣ್ಣಗಿದೆ, ಸೋಫಾದಲ್ಲಿ ಕೂರು' ನಾನು ಒತ್ತಾಯಿಸಿದೆ. ಅಮ್ಮ ಉತ್ತರಿಸಲಿಲ್ಲ.

'ಅಮ್ಮಾ ಏಳು' ನಾನು ಅವರ ಹೆಗಲಿಗೆ ಆಸರೆ ನೀಡಿದೆ. ನನ್ನ ಸ್ಪರ್ಶ ಪ್ರಭಾವ ಬೀರಿತು. ಅವರು ಮುಖವೆತ್ತಿ ನನ್ನನ್ನು ನೋಡಿದರು.

'ಅಮ್ಮಾ ಏಳು, ಸೋಫಾದಲ್ಲಿ ಕೂರು. ನಾನು ಚಹಾ ಮಾಡಿ ತರ್ತೀನಿ' ಎಂದೆ. ಅಮ್ಮ ಮಾತನಾಡಲಿಲ್ಲ, ಆದರೆ ಏಳುವ ಅಸಫಲ ಯತ್ನ ಮಾಡಿದರು. ಒಂದೂವರೆ ಗಂಟೆಗಳ ಕಾಲ ತಣ್ಣನೆಯ ನೆಲದ ಮೇಲೆ ಕೂತಿದ್ದರಿಂದ ಅವರ

